ಓ.ಎಸ್. ನಂ. 210/2014

ಪಿ.ಡಬ್ಲ್ಯೂ: 01. (Chowdamma)

ದಿನಾಂಕ: 28.11.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲು: ಪ್ರತಿವಾದಿ ಪರ – ಶ್ರೀ HBR ವಕೀಲರಿಂದ.

ದಾವಾ ಸ್ವತ್ತಿನ ಸರ್ವೆ ನಂಬರ್ ನನಗೆ ಹೇಳಲಾಗುವುದಿಲ್ಲ. ನನಗೆ ದಾವಾ ಸ್ವತ್ತನ್ನು ಅದರ ಅಡ್ಡಹೆಸರಿನ ಮೂಲಕ ಹೇಳಬಲ್ಲೆ. ನನ್ನ ದೊಡ್ಡಪ್ಪ ಜೀವಂತ ಇದ್ದಾಗ ಐಟಂ ನಂಬರ್ 1 ರಿಂದ 4 ಸಾಗುವಳಿ ಮಾಡುತ್ತಿದ್ದ ಎಂದರೆ ಒಟ್ಟು ಕುಟುಂಬದಲ್ಲಿದ್ದಾಗ ಎಲ್ಲರು ಸಾಗುವಳಿ ಮಾಡುತ್ತಿದ್ದರು. ನನ್ನ ದೊಡ್ಡಪ್ಪ ಜೀವಂತ ಇದ್ದಾಗ ಸದರಿ ಜಮೀನುಗಳು ಆತನ ಹೆಸರಿಗೆ ಖಾತಾ ವರ್ಗಾವಣೆಯಾಗಿತ್ತು ಎಂದರೆ ಹೌದು. ಆತ ಹಿರಿಯ ಮಗನಾದ ಕಾರಣ ಆ ರೀತಿ ಆಗಿರುತ್ತದೆ.

ಬೆಳ್ಳಿಕಟ್ಟೆ ಗ್ರಾಮದಲ್ಲಿರುವ ಮನೆ ಆತನ ಹೆಸರಿನಲ್ಲಿತ್ತು ಎಂದರೆ ಹೌದು. ಆತ ಹಿರಿಯ ಮಗನಾದ ಕಾರಣ ಆ ರೀತಿ ಇರುತ್ತದೆ. ಅದೇ ರೀತಿ ನನ್ನ ತಂದೆ ಜೀವಂತ ಇದ್ದಾಗ 5 ಎಕರೆ 8 ಸೆಂಟ್ಸ ಜಮೀನು ಆತನ ಹೆಸರಿಗೆ ಇತ್ತು ಎಂದರೆ ಅದನ್ನು ಒಟ್ಟು ಕುಟುಂಬದಲ್ಲಿದ್ದಾಗ ಆತ ಸಾಗುವಳಿ ಮಾಡುತ್ತಿದ್ದ. ಅದೇ ರೀತಿ ಬೆಳ್ಳಿಕಟ್ಟೆ ಗ್ರಾಮದಲ್ಲಿರುವ ಪೂರ್ವಭಾಗಿಲಿನ ಮನೆ ಸಂಖ್ಯೆ 121 ಆತನ ಹೆಸರಿನಲ್ಲಿತ್ತು ಎಂದರೆ ಸುಳ್ಳು.

ಅದೇ ರೀತಿ ನನ್ನ ಚಿಕ್ಕಪ್ಪನ ಹೆಸರಿನಲ್ಲಿ ಭರಮಜ್ಜಿ ಕಟ್ಟೆ ಜಮೀನು, ಮಾವಿನ ಮರದ ಕಟ್ಟೆ ಜಮೀನು, ಭಾವಿ ಮೇಲ್ಗಳ ಜಮೀನು ಇದ್ದವು ಎಂದರೆ ಸುಳ್ಳು. ಅದೇ ರೀತಿ ನಮ್ಮ ತಂದೆ, ನಮ್ಮ ದೊಡ್ಡಪ್ಪನ ಮಗ 7 ನೇ ಪ್ರತಿವಾದಿಗೆ ದಾವಾ ಐಟಂ ನಂಬರ್ 8 ಸರ್ವೆ ನಂಬರ್ 109 ಬಿಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ಅದನ್ನೆಲ್ಲ ಸೃಷ್ಟಿ ಮಾಡಿಕೊಂಡಿರುತ್ತಾರೆ. ಸದರಿ ಖಣದಲ್ಲಿ ಸಿದ್ದಪ್ಪ ಇದ್ದಾರೆ ಎಂದರೆ ಹೌದು. ಎಲ್ಲರೂ ಒಟ್ಟಾಗಿ ಸದರಿ ಜಮೀನಿನಲ್ಲಿ ಇದ್ದೇವೆ. 8 ನೇ ಪ್ರತಿವಾದಿಯ ಹೆಸರಿಗೆ ನಿಡಿ 48 ರ ಪ್ರಕಾರ ಖಾತಾ ವರ್ಗಾವಣೆಯಾಗಿದೆ ಎಂದರೆ ಸುಳ್ಳು.

ನನ್ನ ತಂದೆ, ಚಿಕ್ಕಪ್ಪ ಹಾಗೂ ದೊಡ್ಡಪ್ಪನ ಮಧ್ಯ ಯಾವುದೇ ವ್ಯತ್ಯಾಸ ಇಲ್ಲ ಎಂದರೆ ಸರಿ. ಈಗಲೂ ಸಹ ವ್ಯತ್ಯಾಸ ಇಲ್ಲ. ಆದ ಕಾರಣ ಅವರುಗಳು 1995 ರ ಪೂರ್ವದಲ್ಲಿ ದಾವಾ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡು ಜೀವನ ಮಾಡುತ್ತಿದ್ದರು ಎಂದರೆ ಸುಳ್ಳು. ದಿ: 05.01.1995 ರಂದು ಅದನ್ನು ದಾಖಲಾತಿ ರೂಪದಲ್ಲಿ ಬರೆದುಕೊಂಡಿರುತ್ತಾರೆ ಎಂದರೆ ಎಲ್ಲ ಸೃಷ್ಟಿ ಮಾಡಿರುತ್ತಾರೆ.

ಓ.ಎಸ್. ನಂ. 210/2014

ಪಿ.ಡಬ್ಲ್ಯೂ: 01. (Chowdamma)

1 ನೇ ಪ್ರತಿವಾದಿ ನನ್ನ ಸ್ವಂತ ಅಕ್ಕ. 1 ನೇ ನೇ ಪ್ರತಿವಾದಿಯ ಗಂಡ 8 ನೇ ಪ್ರತಿವಾದಿ. 8 ನೇ ಪ್ರತಿವಾದಿ ನನ್ನ ತಾಯಿಯ ಅಣ್ಣನ ಮಗ. 8 ನೇ ಪ್ರತಿವಾದಿ ಹಾಗೂ ನಾವು ಚೆನ್ನಾಗಿದ್ದೇವೆ. ಸಾಕ್ಷಿ ಮುಂದುವರೆದು ಭಾಗ ಕೇಳಿದಾಗಿನಿಂದ ಮಾತಿಲ್ಲ. ವಿಭಾಗ ಆದಾಗಿನಿಂದ ಅದನ್ನು ಯಾರು ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಹೌದು. ನಾನೊಬ್ಬಳೇ ಪ್ರಶ್ನಿಸಿರುತ್ತೇನೆ ಎಂದರೆ ಹೌದು.

ನಮ್ಮ ತಂದೆ ಹೆಬ್ಬೆಟ್ಟು ಗುರುತು ಹಾಕುತ್ತಿದ್ದರು, ಸಹಿ ಮಾಡಲು ಬರುತ್ತಿರಲಿಲ್ಲ. ನಿಡಿ 49 ರ ಸಾಕ್ಷಿದಾರರ ಹೆಸರು ಓದಲಾಗಿ ಅವರು ನಮ್ಮೂರಿನವರಲ್ಲ ಅವರು ಯಾರು ಎಂದು ನನಗೆ ಗೊತ್ತಿಲ್ಲ. ದಿಃ 04.01.2010 ರಂದು ನಿಡಿ 49 ರಂತೆ 8 ನೇ ಪ್ರತಿವಾದಿಗೆ ಕ್ರಯ ಪತ್ರವನ್ನು ಅದರಲ್ಲಿರುವ ಮಾರಾಟಗಾರರು ಬರೆದುಕೊಟ್ಟಿರುವ ಬಗ್ಗೆ ನನಗೆ ಗೊತ್ತಿದ್ದರು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅವರ ಜೀವಂತ ಕಾಲದಲ್ಲಿ ವಿಭಾಗವಾದ ನಂತರ ಅವರ ಪಾಲಿಗೆ ಬಂದ ಆಸ್ತಿಯನ್ನು ಅವರು ಆಯ್ಕೆ ಸಹ ಮಾಡಿದ್ದರು ಎಂದರೆ ಎಲ್ಲ ಸುಳ್ಳು. ಸದರಿ ಸಾಲವನ್ನು ತೀರಿಸಲಾಗದೇ ಐಟಂ ನಂಬರ್ 9-12 ನ್ನು 8 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಎಲ್ಲ ಸುಳ್ಳು. ದಿಃ 05.07.2008 ರಂದು ಸದರಿ ಪತ್ರ ನೊಂದಾಯಿತವಾಗಿದೆ ಎಂದರೆ ಎಲ್ಲ ಸುಳ್ಳು. ನನು ಸದರಿ ಕ್ರಯಪತ್ರವನ್ನು ಪ್ರಶ್ನಿಸಿರುವುದಿಲ್ಲ ಎಂದರೆ ಹೌದು. ಸಾಕ್ಷಿ ಮುಂದುವರೆದು ಆದ ಕಾರಣ ಈ ದಾವೆಯನ್ನು ಸಲ್ಲಿಸಿರುತ್ತೇನೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.